

ಸೂರ್ಯೋದಯ, ಚಂದ್ರಶಿಲಾ

ಮೂಡಣ ಭಾಗದಲ್ಲಿ ಹೊನ್ನ ಬಣ್ಣ ಅದೆಷ್ಟು ಸಾಂದ್ರವಾಗಿ ಕಾಣಿಸ ತೊಡಗಿತ್ತೆಂದರೆ, ನಾವು ಎಲ್ಲವನ್ನೂ ಮರೆತು ಆ ಕಡೆಗೇ ದಿಟ್ಟಿಸಿ ನೋಡುತ್ತಿದ್ದೆವು. ನಿಧಾನವಾಗಿ ಸೂರ್ಯನ ಶಿರ ಸಣ್ಣ ರೇಖೆಯಂತೆ ಪರ್ವತ ಸಾಲುಗಳ ಹಿಂಭಾಗದಲ್ಲಿ ಕಾಣಿಸಿತು. ಸೂರ್ಯ ಕಾಣಿಸ ತೊಡಗಿದಾಗ ಪರ್ವತ ಶಿಖರಗಳೆರಡರ ನಡುವೆ ಸೂರ್ಯನ ಮಂಡಲ ನಿಂತು, ಕಿರಣಗಳು ಎರಡು ಬಾಣಗಳಂತೆ ಎರಡು ಕಡೆಗೆ ರೇಖಾಕೃತಿಯಲ್ಲಿ ತೂರಿಬಂದ ಮೆರುಗು ಉಳಿದೆಲ್ಲ ದೃಶ್ಯಗಳನ್ನೂ ಮೀರಿಸಿ ನಮ್ಮನ್ನು ಅಶ್ಚರ್ಯಚಕಿತರಾಗುವಂತೆ ಮಾಡಿತು.

ಸೂರ್ಯ ಮೇಲೆ ಬಂದಂತೆಲ್ಲ ಹೊಂಬಣ್ಣ ನಿಧಾನವಾಗಿ ಕರಗಿ, ರಜತವರ್ಣ ತಾಳತೊಡಗಿತು. ಸುಮಾರು ಆರುಗಂಟೆಯವರೆಗೂ ಅಲ್ಲಿದ್ದು, ೩೬೦ ಡಿಗ್ರಿ ಸುತ್ತಲೂ ಕಾಣುವ ದೂರದೂರದ ಹಿಮಾವೃತ ಶಿಖರಗಳನ್ನು ಕಣ್ತುಂಬಾ ನೋಡಿ, ನಡುನಡುವೆ ಎದ್ದು ನಿಂತಿದ್ದ ಭೀಮಾಕಾರದ ಹತ್ತಿರದ ಪರ್ವತಶಿಖರಗಳು, ಅವುಗಳನ್ನು ಕವಿದ ದಟ್ಟ ಅರಣ್ಯ, ಭೀಕರ ಕಣಿವೆಗಳು – ಎಲ್ಲ ವೈವಿಧ್ಯಗಳನ್ನು ಗಮನಿಸುತ್ತ ಕಾಲ ಕಳೆದೆವು. ಇನ್ನು ಮರಳಬೇಕೆನಿಸಿತು. ಮರಳಿ ಬರುವಾಗ ಬೆಳಗಾಗಿತ್ತು, ಇಳಿಯುವ ರಭಸ ಬೇರೆ. ಇಪ್ಪತ್ತೇ ನಿಮಿಷ ಗಳಲ್ಲಿ ತುಂಗನಾಥ ತಲುಪಿದೆವು. ಬೇಗನೆ ತುಂಗನಾಥನ ಕೊನೆಯ ದರ್ಶನ ಮಾಡಿ ಬಂದು, ಆರೂವರೆಗೆ ಮರಳಿ ಚೋಪ್ತಾ ಕಡೆಗೆ ಇಳಿಯಲು ಆರಂಭಿಸಿದೆವು.

## ೫. ಭೂಖರ್‌ತಾಲ್ ಬಸ್ ಪ್ರಯಾಣದ ಗೊಂದಲ

ತುಂಗನಾಥದಿಂದ ಇಳಿಯುತ್ತ ಹೊರಟ ನಾವು ೭.೪೫ರ ಹೊತ್ತಿಗೆ ಚೋಪ್ತಾ ತಲುಪಿದೆವು. ಅಲ್ಲಿಂದ ೮.೩೦ರ ಹೊತ್ತಿಗೆ ಒಂದು ಬಸ್ ಬದರೀನಾಥದ ಕಡೆಗೆ ಹೋಗುತ್ತದೆ. ಕೇದಾರನಾಥದಿಂದ ಬದರೀನಾಥಕ್ಕೆ ಗೋಪೇಶ್ವರ ಮೂಲಕ ಹೋಗುವ ಒಂದೇ ಒಂದು ಬಸ್ಸು ಅದು. ಈ ದಾರಿಯಲ್ಲಿ ಬಂದರೆ ಊಖೀಮಠದಿಂದ ಸ್ವಲ್ಪ ಮುಂದಕ್ಕೆ  ಒಂದು ಸ್ಥಳದಲ್ಲಿ ತುಂಬಾ ಸುಂದರವಾದ, ರಮ್ಯ ಪರ್ವತಗಳು ಕಾಣಸಿಗುತ್ತವೆ. ಆ ಪ್ರದೇಶವನ್ನು 'ಭಾರತದ ಸ್ವಿಟ್ಜರ್ ಲೆಂಡ್' ಎಂದೂ ಕರೆಯುತ್ತಾರೆ. ಯಾತ್ರಿಕರು ಕೇದಾರದಿಂದ ಬದರಿಗೆ ಈ ದಾರಿಯಾಗಿ ಹೋಗಲು ಹಾತೊರೆಯುತ್ತಾರೆ. ಆದರೆ ಇರುವುದೊಂದೇ ಬಸ್ಸು. ಜನವೆಂದರೆ ಜನ. ಬಸ್ಸಲ್ಲಿ ನಿಂತಾದರೂ ಸರಿ, ನೇತಾಡಿದರೂ ಸರಿ. ಟಾಪ್ ಮೇಲೆ ಕೂಡ ಜನ ತುಂಬಿರುತ್ತಾರೆ. ಅದೇಕೆ ಇಷ್ಟೊಂದು ಬೇಡಿಕೆಯಿದ್ದರೂ ಈ ಮಾರ್ಗವಾಗಿ ಬೇರೆ ಬಸ್ಸು ಹಾಕಲು ಪರ್ಮಿಟ್ ಕೊಡಲಿಲ್ಲವೊ! ಅನೇಕ ಮಂದಿ ಅನೇಕ ಬಾರಿ ಉತ್ತರಾಖಂಡ ಸರ್ಕಾರಕ್ಕೆ ಶಾಪ ಹಾಕಿದ್ದಿರಬೇಕು. ನಾವಂತೂ ಅನೇಕ ಬಾರಿ ಶಾಪ ಹಾಕಿದ್ದೇವೆ. ಈ ಬಸ್ 'ಭೂಖರ್‌ತಾಲ್' ಎಂಬ ಪ್ರದೇಶದ ಮೂಲಕ ಹೋಗುತ್ತದೆ. ಹೀಗಾಗಿ ಇದನ್ನು 'ಭೂಖರ್ ತಾಲ್ ಬಸ್ಸು' ಎಂದು ಕರೆಯುವುದಿದೆ.

ಬಸ್ಸು ಬರುವ ಮೊದಲೇ ತಿಂಡಿ ತಿಂದು ಮುಗಿಸಬೇಕಿತ್ತು. ನಾವು ಲಗೇಜನ್ನಿಟ್ಟ ಹೋಟೆಲಿನಲ್ಲೇ ತಿಂಡಿ ತಿಂದೆವು. ೮.೩೦ ಹೊತ್ತಿಗೆ ಬಸ್ ಬರುತ್ತದೆ ಎಂದು ಕಾದು ನಿಂತರೆ, ಬಸ್ ಬರುವ ಲಕ್ಷಣವೇ ಕಾಣಲಿಲ್ಲ. ನಾವು ಸಾಗಬೇಕಾದ ದಾರಿ ಕೇವಲ ಒಂದು ಗಂಟೆಯದ್ದಷ್ಟೆ. ಆದರೆ ಆ ಮಾರ್ಗವಾಗಿ ಪ್ರೈವೇಟ್ ಗಾಡಿಗಳು ಹೋಗುತ್ತವಲ್ಲದೆ ಬೇರೆ ಯಾವುದೇ ಜೀಪ್ ಅಥವಾ ಮೋಟಾರ್ ಗಳು ಹೋಗುವುದಿಲ್ಲ. ನಾವೇ ಪ್ರತ್ಯೇಕವಾಗಿ ಬಾಡಿಗೆ ಮಾಡಿ ಹೋಗುವುದಾಗಿದ್ದರೆ ಎರಡು ಸಾವಿರ ರೂ. ಹೇಳುತ್ತಾರೆ. ಅಷ್ಟೆಲ್ಲ ಹಣ ನಾವೆಲ್ಲಿಂದ ತರೋಣ? ಬಸ್ಸಲ್ಲಿ ನೇತಾಡಿಯಾದರೂ ಹೋಗೋಣ ಎಂದು ಕಾದು ನಿಂತೆವು. ೮.೩೦ ಕ್ಕೆ ಬರಬೇಕಾಗಿದ್ದ ಬಸ್ಸು ೯ ಗಂಟೆಗೆ ಬಂದು ನಿಂತಾಗ ನಮಗೆ ಗಾಬರಿಯಾಯಿತು. ಬಸ್ಸಿನೊಳಗೆ ಜನ ತುಂಬಿದ್ದಲ್ಲದೆ, ಎರಡೂ ಬಾಗಿಲಿನಲ್ಲಿ ನೇತಾಡು ವವರು, ಹಿಂದೆ ಏಣಿಯಲ್ಲಿ ನಿಂತವರು, ಬಸ್ಸಿನ ಮೇಲೂ ಜನ ! ಈ ಬಸ್ಸಿನಲ್ಲಿ ನಾವು ಹೋದ ಹಾಗೆಯೇ ಎಂದುಕೊಂಡೆವು. ಅಲ್ಲಿ ಚಹಾ ಕುಡಿಯಲು ಬಸ್ ನಿಲ್ಲಿಸಿದಾಗ ಎಲ್ಲ ಜನರೂ ಕೆಳಗಿಳಿದರು. ಇದೇ ಸುಸಮಯವೆಂದು ನಾವು ಬಸ್ಸಿನೊಳಕ್ಕೆ ಹತ್ತಿ, ಡ್ರೈವರ್ ಪಕ್ಕದಲ್ಲಿ ಒರಗಿ ನಿಂತೆವು. ನಿಂತಾದರೂ ಸರಿ, ಎಷ್ಟೇ ಗದ್ದಲವಾದರೂ ಸರಿ, ನಾವು ಹೋಗಿಯೇಬಿಡುವುದು ಎಂದು ತೀರ್ಮಾನಿಸಿದೆವು. ಸುಮಾರು ಇಪ್ಪತ್ತು ನಿಮಿಷದಲ್ಲಿ ತಿಂಡಿ ತಿಂದ ಯಾತ್ರಿಕರೆಲ್ಲ ಒಬ್ಬೊಬ್ಬರಾಗಿ ಬಂದು ಹತ್ತಿದಾಗ, ಉಸಿರಾಡಲೂ ಅವಕಾಶವಿಲ್ಲ ದಷ್ಟು ಬಿಗಿಯಾಗಿಬಿಟ್ಟಿತು. ಯಾರದೋ ಕೈಕಾಲುಗಳು ನಮ್ಮ ಮುಂದೆ-ಹಿಂದೆ ಬಿಗಿಯುತ್ತಿದ್ದವು; ಕಿರುಚಾಟ, ನರಳಾಟ, ಬೈಗುಳ – ಇವೆಲ್ಲವುಗಳ ನಡುವೆ ಕಂಡಕ್ಟರ್ ಸೀಟಿ ಹೊಡೆದ, ಬಸ್ ಹೊರಟೇ ಬಿಟ್ಟಿತು. ಬಸ್ಸು ಮುಂದಕ್ಕೆ ಸಾಗಿದಂತೆ ನಾವು ಅತ್ಯಂತ ದಟ್ಟ ಅರ ಣ್ಯದ ಮೂಲಕ ಹಾದುಹೋಗಬೇಕಾಯಿತು. ಜನವಸತಿ ಇಲ್ಲದ, ರಾಷ್ಟ್ರೀಯ ಉದ್ಯಾನವನ ಅಥವಾ ರಕ್ಷಿತಾರಣ್ಯದಂಥ ಕಾಡುಪ್ರದೇಶ ಹಿಮಾಲಯದಲ್ಲಿ ಕಾಣಸಿಗುವುದು ಅಪರೂಪ. ಬಸ್ಸಿನಲ್ಲಿ ನಿಂತು ಕೊಂಡು ಬಹಳಷ್ಟು ಕಷ್ಟದಿಂದ ಕಾಡಿನ ಸೊಬಗನ್ನು ನಾವು ಸವಿಯ ಬೇಕಾಯಿತು. ಅಂತೂ ಸುಮಾರು ೧೧.೩೦ರ ಹೊತ್ತಿಗೆ ಬಸ್ಸು ಸಗರ್ ಎನ್ನುವ ಸ್ಥಳವನ್ನು ತಲುಪಿತು. ಚಕ್ರವರ್ತಿ ಸಗರನಿಗೆ ಸಂಬಂಧಪಟ್ಟ ಒಂದು ಕಥೆ, ಒಂದು ದೇವಸ್ಥಾನ ಇವೆಲ್ಲ ಇರುವ ಒಂದು ಸಣ್ಣ ಊರು ಅದು. ನಮ್ಮ ಮುಂದಿನ ಕ್ಷೇತ್ರವಾದ ರುದ್ರ ನಾಥಕ್ಕೆ ಹೊರಡಲು ಮೊದಲಿಗೆ ನಾವು ತಲುಪಬೇಕಾಗಿದ್ದ ಪ್ರದೇಶವೇ ಅದು.

*(ಮುಂದುವರಿಯುವುದು)*

ಸಂತರ ಜೀವನ ಕಥೆ

# ವಿಠಲನ ಸಖ ನಾಮದೇವ



**ಸ್ವಾಮಿ ವೀರೇಶಾನಂದ**

ಮಹಾರಾಷ್ಟ್ರದ ಭಕ್ತಿಪರಂಪರೆಯಲ್ಲಿ ದೊಡ್ಡ ಹೆಸರು ನಾಮದೇವನದು. ಸಂಸಾರಿಯಾಗಿದ್ದೂ ಭಗವಂತನ ದರ್ಶನ ಸಾಧ್ಯವೆಂಬುದನ್ನು ತನ್ನ ಜೀವನದ ಮೂಲಕ ತೋರಿಸಿಕೊಟ್ಟವನು ಅವನು. ಅವನ ಸರಳ, ಸುಂದರ ಜೀವನವನ್ನು ಇಲ್ಲಿ ಚಿತ್ರಿಸಿರುವ ಲೇಖಕರು ಈ ಪತ್ರಿಕೆಯ ಹಿಂದಿನ ಸಂಪಾದಕರು. ಉತ್ತಮ ವಿದ್ವಾಂಸರೂ, ಲೇಖಕರೂ, ಭಾಷಣಕಾರರೂ ಆಗಿರುವ ಅವರು ಬೇಲೂರು ಮಠದಲ್ಲಿರುವ ಬ್ರಹ್ಮಚಾರಿ ಪ್ರಶಿಕ್ಷಣ ಕೇಂದ್ರದಲ್ಲಿ ಆಚಾರ್ಯರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

---

**ನಾ**ಮದೇವ ವಿಠಲನ ಭಕ್ತ. ಭಕ್ತ ಮಾತ್ರವಲ್ಲ, ಸ್ನೇಹಿತ. ವಿಠಲನಿಗೆ ನಾಮದೇವನನ್ನು ಬಿಟ್ಟು ಇರಲು ಆಗುತ್ತಿರಲಿಲ್ಲ. ನಾಮದೇವನಿಗೆ ವಿಠಲನನ್ನು ಬಿಟ್ಟು ಇರಲು ಆಗುತ್ತಿರಲಿಲ್ಲ. ಪಂಢರಾಪುರದ ಕಲ್ಲಿನ ವಿಠಲ ನಾಮದೇವನಿಗೆ ಚಿನ್ಮಯ ವಿಠಲನಾಗಿದ್ದ. ತನ್ನ ಜೀವದ ಜೀವನಾಗಿದ್ದ. ತನ್ನ ಆತ್ಮದ ಆತ್ಮನಾಗಿದ್ದ. ವಿಠಲನೇ ಗತಿಯಾಗಿದ್ದ, ಸ್ನೇಹಿತನಾಗಿದ್ದ, ಪ್ರಭುವಾಗಿದ್ದ, ಆತ್ಮಸ್ವರೂಪನಾಗಿದ್ದ – ಎಲ್ಲವೂ ಆಗಿದ್ದ.

ಮಹಾರಾಷ್ಟ್ರ ಸಂತರ ನಾಡು. ಮಹಾನ್ ಭಕ್ತರ ಬೀಡು. ಅಲ್ಲಿನ ಸತಾರಾ ಜಿಲ್ಲೆಯ ಕರಾಡ್ ಹತ್ತಿರ ನರಸಿಬಾಮನಿ ಎಂಬ ಹಳ್ಳಿಯಲ್ಲಿ ನಾಮದೇವ ಹುಟ್ಟಿದ. ಆ ಹಳ್ಳಿ ಕೃಷ್ಣಾನದಿಯ ದಡದಲ್ಲಿತ್ತು. ಹುಟ್ಟಿದ್ದು ೧೨೭೦ರಲ್ಲಿ. ಮಹಾರಾಷ್ಟ್ರದ ಜ್ಞಾನಿ ಸಂತ ಜ್ಞಾನದೇವನ ಸಮಕಾಲೀನ ಈತ. ಅವನಿಗಿಂತ ಐದು ವರ್ಷ ಮಾತ್ರ ದೊಡ್ಡವನು.

ನಾಮದೇವನ ತಂದೆ ದಾಮ ಸೆಟ್ಟಿ ಬಟ್ಟೆ ಹೊಲಿಯುವ ಕಾಯಕವನ್ನು ಮಾಡುತ್ತಿದ್ದ. ಆತನು ವಾರಿ ಪಂಗಡಕ್ಕೆ ಸೇರಿದವನು. ಈ ಪಂಗಡದವರು ವರ್ಷಕ್ಕೆ ಎರಡು ಸಲ ಪಂಢರಾಪುರಕ್ಕೆ ನಡೆದುಕೊಂಡೇ ಯಾತ್ರೆಗೆ ಹೋಗುತ್ತಾರೆ. ಆಷಾಢ ಮತ್ತು ಕಾರ್ತಿಕ ಮಾಸಗಳಲ್ಲಿ ಜರಗುವ ಈ ಯಾತ್ರೆಯನ್ನು ವಾರಿ ಎಂದು ಕರೆಯುತ್ತಾರೆ. ದಾಮ ಸೆಟ್ಟಿ ತನ್ನ ಕುಟುಂಬಕ್ಕೆ ಸ್ವಲ್ಪ ಹೆಚ್ಚು ಹಣ ಗಳಿಸಿಕೊಳ್ಳಲೆಂದು ಪಂಢರಾಪುರಕ್ಕೆ ವಲಸೆಬಂದ. ಅಲ್ಲಿಯೇ ತನ್ನ ಉದ್ಯೋಗ ಮಾಡುತ್ತಿದ್ದ.

ನಾಮದೇವ ಭಾಗವತದಲ್ಲಿ ಬರುವ ಪ್ರಹ್ಲಾದನಂತೆ ಹುಟ್ಟಿನಿಂದಲೇ ಪರಮಭಕ್ತ. ಅವನು ಸ್ಪಷ್ಟವಾಗಿ ಉಚ್ಚರಿಸಿದ ಮೊದಲ ಪದವೆಂದರೆ 'ವಿಠಲ'. ಅಂದಿನಿಂದ ಸತತವಾಗಿ ವಿಠಲನ ನಾಮೋಚ್ಚಾರಣೆ ಆ ಪುಣ್ಯ ಶಿಶುವಿನ ಪುಟ್ಟ ಬಾಯಿಯಿಂದ ಪುಂಖಾನುಪುಂಖವಾಗಿ ಪ್ರವಹಿಸುತ್ತಲೇ ಇತ್ತಂತೆ. ಆತನ ತಾಯಿ ಗುಣಾಬಾಯಿ ಮಗುವನ್ನು ವಿಠಲನ ದೇವಸ್ಥಾನಕ್ಕೆ ಕರೆದುಕೊಂಡು ಹೋಗುತ್ತಿದ್ದಳು. ವಿಠಲನ ದರ್ಶನವೆಂದರೆ ಮಗುವಿಗೆ ಮಹಾಪ್ರೀತಿ. ಏಳು ವರ್ಷ ಇರುವಾಗ, ಒಂದು ಕರತಾಳವನ್ನು ತೆಗೆದುಕೊಂಡು, ಗಂಟೆಗಟ್ಟಲೆ ಭಜನೆ ಮಾಡುತ್ತ ಕೂಡುವುದು ಅವನಿಗೆ ಅಭ್ಯಾಸವಾಗಿಹೋಯಿತು. ಊಟ, ನಿದ್ರೆ, ಆಟ, ಪಾಠ – ಎಲ್ಲವನ್ನೂ ಮರೆತು ವಿಠಲನ ನಾಮ ಸಂಕೀರ್ತನೆ ಮಾಡುವುದು, ಆನಂದಭಾವದಿಂದ ಕುಣಿಯುವುದು ಅವನ ದಿನಚರಿಯಾಗಿ ಹೋಯಿತು. ನಾಮದೇವನ ಭಕ್ತಿ ಅತ್ಯಂತ ಪರಿಶುದ್ಧ ಭಕ್ತಿ, ಕೋಮಲ ಭಕ್ತಿ. ವಿಠಲನನ್ನು 'ಅಣ್ಣ'ನೆಂದೇ ಅವನು ಪರಿಗಣಿಸಿದ್ದ. ಅವನ ಚಿಂತನೆಯಲ್ಲಿಯೇ ತನ್ಮಯನಾಗಿಬಿಡುತ್ತಿದ್ದ.

ಒಂದು ದಿನ ನಾಮದೇವನ ತಾಯಿ ಬೇರೆ ಕೆಲಸಗಳಲ್ಲಿ ಮಗ್ನಳಾಗಿದ್ದಳು. ದೇವಸ್ಥಾನದಲ್ಲಿ ನೈವೇದ್ಯಕ್ಕಾಗಿ ತಿಂಡಿತಿನಿಸುಗಳ ತಟ್ಟೆಯನ್ನು ತೆಗೆದುಕೊಂಡು ಹೋಗುವಂತೆ ನಾಮದೇವನಿಗೆ ಹೇಳಿದಳು. ಮುಗ್ಧ ಮನಸ್ಸಿನ ನಾಮದೇವ ದೇವರ ಮುಂದೆ ಆ ತಟ್ಟೆಯನ್ನು ಇಟ್ಟ, ಸ್ವೀಕರಿಸುವಂತೆ ವಿಠಲನನ್ನು ಕೇಳಿಕೊಂಡ. ವಿಠಲನಿಂದ ಯಾವ ಪ್ರತಿಕ್ರಿಯೆಯೂ ಬರಲಿಲ್ಲ. ನಾಮದೇವ ಗಟ್ಟಿಯಾಗಿ ಅಳಲಾರಂಭಿಸಿದ. ನೈವೇದ್ಯ ಸ್ವೀಕರಿಸುವಂತೆ ಮತ್ತೆ ಮತ್ತೆ ವಿಠಲನನ್ನು ಕೇಳಿಕೊಂಡ. ಆ ಭಕ್ತ ಮಗುವಿನ ಆಕ್ರಂದನವನ್ನು ಕೇಳಿ ತಾಳಲಾರದೆ, ವಿಠಲ ಮಾನವ ಆಕಾರವನ್ನು ತಾಳಿ ನೈವೇದ್ಯ ಸ್ವೀಕರಿಸಿದ. ಖಾಲಿ ತಟ್ಟೆಯನ್ನು ಹೊತ್ತುಕೊಂಡು ಮಗು ಹಿಂತಿರುಗಿತು. ಇದನ್ನು ನೋಡಿ ತಾಯಿ ಆಶ್ಚರ್ಯಚಕಿತಳಾದಳು. ನಾಮದೇವ ನಡೆದದ್ದನ್ನೆಲ್ಲ ಹಾಗೆಯೇ ಹೇಳಿದ. ಮರುದಿನವೂ ಅವನಿಗೇ ಆ ಕೆಲಸ ವಹಿಸಿದಳು, ಗುಣಾಬಾಯಿ. ಈ ಸಲ ಅವನಿಗೆ ಗೊತ್ತಾಗದಂತೆ ಹಿಂಬಾಲಿಸಿದಳು. ಮರೆಯಲ್ಲಿ ನಿಂತು ಎಲ್ಲವನ್ನೂ ನೋಡಿ ದಂಗಾದಳು. ತನ್ನ ಮಗ ಬಹುದೊಡ್ಡ ಭಕ್ತನೆಂದು ಅರಿತು ಆನಂದಪಟ್ಟಳು. ಇಂಥ ಮಗನನ್ನು ದಯಪಾಲಿಸಿದ್ದಕ್ಕಾಗಿ ದೇವರಿಗೆ ಕೃತಜ್ಞತೆಗಳನ್ನು ಅರ್ಪಿಸಿದಳು.

ತಂದೆತಾಯಿಗಳಿಗೆ ವಯಸ್ಸಾಗುತ್ತ ಬಂತು. ನಾಮದೇವ ಏನಾದರೂ ವ್ಯಾಪಾರ ಮಾಡಿ, ಸಂಸಾರ ನಿರ್ವಹಣೆ ಮಾಡಲಿ ಎಂದು ಅವರ ಆಸೆ. ಆದರೆ ಅವನಿಗೆ ಇದಾವುದರ ಪರಿವೆಯೇ

ಇಲ್ಲ, ಅವನಾಯಿತು, ಅವನ 'ವಿಠಲ'ನಾಯಿತು. ವಿಠಲನ ಮಾನಸಿಕ ಸಾಂಗತ್ಯದಲ್ಲಿ ನಾಮದೇವನು ಅಪಾರ ಆನಂದವನ್ನು ಅನುಭವಿಸುತ್ತಿದ್ದನು. ನಾಮಸಂಕೀರ್ತನೆಯಲ್ಲಿ ದಿನವೆಲ್ಲ ಕಳೆಯುತ್ತಿದ್ದನು.

ಒಮ್ಮೆ ನಾಮದೇವನ ತಂದೆತಾಯಿಗಳು ಬಹಳ ಒತ್ತಾಯ ಮಾಡಿ, ಬಟ್ಟೆಯನ್ನು ಮಾರುವಂತೆ ಮಾರುಕಟ್ಟೆಗೆ ಕಳಿಸಿದರು. ನಾಮದೇವ ಊರಿಗೆ ಹೋದನು. ಒಂದು ಕಲ್ಲಿನ ಮೇಲೆ ಬಟ್ಟೆಗಳನ್ನೆಲ್ಲ ಹರಡಿದನು. ಅದರ ಮೇಲೆ ಕುಳಿತು ವಿಠಲನ ಭಜನೆಯಲ್ಲಿ ತಲ್ಲೀನನಾದನು. ನಾಮದೇವನಿಗೆ ವ್ಯಾಪಾರದ ಬಗೆಗಳ ಪರಿಚಯವೇ ಇರಲಿಲ್ಲ. ಬಟ್ಟೆಗಳಿಗೆ ಯಾವ ಧಾರಣೆ ಎಂಬುದೂ ತಿಳಿದಿರಲಿಲ್ಲ. ಹೀಗಾಗಿ ಯಾವ ವ್ಯಾಪಾರವೂ ಅಂದು ನಡೆಯಲಿಲ್ಲ. ಸಂಜೆಯಾಯಿತು. ನಾಮದೇವ ಸಂಜೆಯ ಆರತಿಗಾಗಿ ವಿಠಲನ ಮಂದಿರಕ್ಕೆ ಹೋಗಬೇಕು. ಆಗ ಅವನಿಗೆ ಜ್ಞಾಪಕಕ್ಕೆ ಬಂತು, ತಾನು ಒಂದು ತುಂಡು ಬಟ್ಟೆಯನ್ನೂ ಮಾರಾಟ ಮಾಡಿಲ್ಲವೆಂದು. ಈಗ ಅವನು ಮಾಡಿದ್ದು ಬಹಳ ವಿಚಿತ್ರ ಕೆಲಸ. ಅವನು ಕುಳಿತಿದ್ದ ಕಲ್ಲಿನ ಪಕ್ಕದಲ್ಲಿಯೇ ಇನ್ನೊಂದು ಕಲ್ಲಿತ್ತು. ಅದಕ್ಕೇ ಎಲ್ಲ ಬಟ್ಟೆಗಳನ್ನೂ ಮಾರಾಟ ಮಾಡಿದೆನೆಂದು ಭಾವಿಸಿದನು. ಆ ಬಟ್ಟೆಗಳನ್ನೆಲ್ಲ ಆ ಇನ್ನೊಂದು ಕಲ್ಲಿನ ಮೇಲೆಯೇ ಇಟ್ಟುಬಿಟ್ಟನು. ಮರುದಿನ ಮಾರಿದ ಬಟ್ಟೆಗೆ ಹಣ ಕೊಡೆಂದು ಕಲ್ಲನ್ನು ಕೇಳಿಕೊಂಡನು. ತಾನು ಕುಳಿತಿದ್ದ ಕಲ್ಲನ್ನೇ ಈ ವ್ಯಾಪಾರಕ್ಕೆ ಸಾಕ್ಷಿಯೆಂದು ಭಾವಿಸಿದನು. ಬಟ್ಟೆಗಳನ್ನು ಅಲ್ಲಿಯೇ ಬಿಟ್ಟು, ವಿಠಲನ ದೇವಸ್ಥಾನಕ್ಕೆ ಧಾವಿಸಿದನು.

ನಾಮದೇವನ ಈ ಸಾಹಸಕಾರ್ಯವನ್ನು ಕೇಳಿ ತಂದೆಗೆ ವಿಪರೀತ ಕೋಪ ಬಂತು. ತನ್ನ ಈ ವ್ಯಾಪಾರಕ್ಕೆ ಒಬ್ಬ ದೊಂಡ್ಯಾ ಸಾಕ್ಷಿ ಎಂದು ನಾಮದೇವ ಹೇಳಿದನು. ದೊಂಡ್ಯಾ ಎಂದರೆ ಮರಾಠಿ ಭಾಷೆಯಲ್ಲಿ, ಕಲ್ಲು ಎಂದೂ ಆಗುತ್ತದೆ; ಒಂದು ಜಾತಿಯ ಜನರು ಎಂದೂ ಆಗುತ್ತದೆ. ತಾನು ಹಿಂದಿನ ದಿನ ಕುಳಿತಿದ್ದ ಜಾಗಕ್ಕೆ ಹೋದನು. ಬಟ್ಟೆಗಳೆಲ್ಲ ಪರಾರಿಯಾಗಿಬಿಟ್ಟಿದ್ದವು! ಸರಿ, ಸಾಕ್ಷಿಯಾದ ದೊಂಡ್ಯಾ (ಕಲ್ಲು) – ಅದನ್ನೇ ಹೊತ್ತು ಮನೆಗೆ ತೆಗೆದುಕೊಂಡು ಬಂದು, ಒಂದು ಕೊಠಡಿಯೊಳಗೆ ಇಟ್ಟು ಬೀಗಹಾಕಿದನು. ತನ್ನ ಪ್ರಿಯ ವಿಠಲನೆಡೆಗೆ ಓಡಿಹೋಗಿ ಎಲ್ಲವನ್ನೂ ಹೇಳಿಕೊಂಡು ಕಣ್ಣೀರುಗರೆದನು. ಮನೆಗೆ ಬಂದಾಗ ತಂದೆ ಈ ಬಗ್ಗೆ ಮತ್ತೆ ವಿಚಾರಿಸಿದನು. ದೊಂಡ್ಯಾನನ್ನು ಮನೆಯಲ್ಲಿಯೇ ಕೂಡಿಹಾಕಿದ್ದೇನೆಂದೂ, ಬೇಗನೇ ಹಣ ಸಿಗುತ್ತದೆಂದೂ ತಂದೆಗೆ ನಾಮದೇವ ಹೇಳಿದನು. ಗಾಬರಿಯಿಂದ ನಾಮದೇವ ಮತ್ತೆ ವಿಠಲ ಮಂದಿರಕ್ಕೆ ಹೋಗಿ ಪ್ರಾರ್ಥನೆಯಲ್ಲಿ ಮಗ್ನನಾದನು. ಇತ್ತ ನಾಮದೇವನ ತಂದೆ ದೊಂಡ್ಯಾನನ್ನು ಹಣಕ್ಕಾಗಿ ವಿಚಾರಿಸೋಣವೆಂದು ಕೊಠಡಿಯ ಬೀಗ ತೆಗೆದು ನೋಡಿದರೆ, ಅಲ್ಲಿ ಅವನು ಕಂಡದ್ದೇನು? ಚಿನ್ನದ ಗಟ್ಟಿ. ತಂದೆಯ ಹರ್ಷಕ್ಕೆ ಕೊನೆಯೇ ಇರಲಿಲ್ಲ. ಆದರೆ ನಾಮದೇವನಿಗೆ ಅದರ ಮೇಲೆ ಮನಸ್ಸೇ ಹೋಗಲಿಲ್ಲ. ತಂದೆಯ ಹೊಡೆತದಿಂದ ಪಾರುಮಾಡಿದ್ದಕ್ಕೆ ವಿಠಲನಿಗೆ ತುಂಬು ಹೃದಯದಿಂದ ಅವನು ಧನ್ಯವಾದ ಸಮರ್ಪಿಸಿದನು. ಮತ್ತೆ ಯಥಾಪ್ರಕಾರ, ವಿಠಲನ ನಾಮಸಂಕೀರ್ತನೆಯಲ್ಲಿ ತಲ್ಲೀನನಾಗಿಬಿಟ್ಟನು.

ಏತನ್ಮಧ್ಯೆ ನಾಮದೇವನಿಗೆ ವಿವಾಹವಾಯಿತು. ಹೆಂಡತಿ ರಾಧಾದೇವಿ ಪ್ರಾಪಂಚಿಕ ಪ್ರವೃತ್ತಿಯವಳಾಗಿದ್ದಳು. ತನ್ನ ಮಗನ ನಾಮಕರಣ ಮಹೋತ್ಸವಕ್ಕೆ ನಾಮದೇವ 'ವಿಠಲ'ನನ್ನು ಆಹ್ವಾನಿಸುತ್ತಾನೆ. ವಿಠಲನು ಮಾರುವೇಷದಲ್ಲಿ ನಾಮಕರಣಕ್ಕೆ ಬಂದಿದ್ದನಂತೆ. ನಾರಾಯಣ ಎಂದು ಹೆಸರಿಟ್ಟ ಆ ಮಗುವಿಗೆ ಧಾರಾಳವಾಗಿ ಕೊಡುಗೆಗಳನ್ನು ಕೊಟ್ಟನಂತೆ.

ನಾಮದೇವನ ಕುಟುಂಬ ಕಡು ದಾರಿದ್ರ್ಯದಿಂದ ತತ್ತರಿಸುತ್ತಿತ್ತು. ನಾಮದೇವನ ಹೆಂಡತಿ ಮತ್ತು ತಾಯಿ ತಮ್ಮೆಲ್ಲ ಸಂಕಷ್ಟಗಳಿಗೆ 'ವಿಠಲ'ನನ್ನೇ ದೂರಲು ಆರಂಭಿಸಿದರು. ಆ ಸಮಯದಲ್ಲಿ ವಿಠಲನು ವೈಕುಂಠಪುರವೆಂಬ ಊರಿನ ಧರ್ಮ ಶೆಟ್ಟಿ ಎಂಬ ವ್ಯಕ್ತಿ ನಾನು ಎಂದು ಹೇಳಿಕೊಂಡು, ನಾಮದೇವನ ಮನೆಗೆ ಬಂದನು. ಬೆಲೆಬಾಳುವ ಕೊಡುಗೆಗಳನ್ನು ಕೊಟ್ಟು ಕುಟುಂಬದ ದಾರಿದ್ರ್ಯವನ್ನು ನೀಗಿದನು.

ಪಂಢರಪುರದಲ್ಲಿ ಪರಿಷ ಭಗವತ್ ಎಂಬ ಮಹಾನ್ ಭಕ್ತನಿದ್ದನು. ಅವನು ಕೃಷ್ಣಸಖಿಯಾದ ರುಕ್ಮಿಣಿಯ ಉಪಾಸನೆಯನ್ನು ಮಾಡಿ ಅವಳನ್ನು ಒಲಿಸಿಕೊಂಡನು. ಅವಳು ಅವನಿಗೆ ಒಂದು ಸ್ಪರ್ಶಮಣಿಯನ್ನು ನೀಡಿದಳು. ಅದು ಕಲ್ಲನ್ನೂ ಚಿನ್ನವನ್ನಾಗಿ ಪರಿವರ್ತಿಸುತ್ತಿತ್ತು. ಪರಿಷನ ಹೆಂಡತಿ ಅದನ್ನು ನಾಮದೇವನ ಹೆಂಡತಿಗೆ ಕೊಟ್ಟಳು. ನಾಮದೇವನ ಹೆಂಡತಿ ತನ್ನ ಗಂಡನಿಗೆ ಅದನ್ನು ತೋರಿಸಿ, ''ನೋಡಿದಿರಾ, ಪರಿಷನ ಭಕ್ತಿಯನ್ನು! ಭಕ್ತಿ ಎಂದರೆ ಹೀಗಿರಬೇಕು'' ಎಂದಳು. ನಾಮದೇವ ಆ ಸ್ಪರ್ಶಮಣಿಯನ್ನು ತೆಗೆದುಕೊಂಡು ನದಿಯಲ್ಲಿ ಬಿಸಾಕಿಬಿಟ್ಟನು. ಇದನ್ನು ಕೇಳಿದ ಪರಿಷನಿಗೆ ಬಹಳ ಕೋಪ ಬಂತು. ನಾಮದೇವನು ತಾನು ಎಸೆದ ಜಾಗವನ್ನು ತೋರಿಸಿದನು. ಪರಿಷ ಅಲ್ಲಿ ಹುಡುಕಾಡಿದಾಗ, ಅಂಥ ನೂರಾರು ಸ್ಪರ್ಶಮಣಿಗಳು ಕಂಡವು. ಪರಿಷನಿಗೆ ತನ್ನ ತಪ್ಪಿನ ಅರಿವಾಯಿತು. ಓಡಿ ಬಂದು, ನಾಮದೇವನ ಕ್ಷಮೆಯನ್ನು ಬೇಡಿದನು. ಅವನು ನಾಮದೇವನ ತ್ಯಾಗಭಾವನೆಯನ್ನು ಕೊಂಡಾಡಿದನು.

ನಾಮದೇವನಿಗೆ ಸಂಸಾರದ ನಿರ್ವಹಣೆ ಬಹಳ ಕಷ್ಟವಾಗುತ್ತ ಹೋಯಿತು. ವಿಠಲನ ಧ್ಯಾನದಲ್ಲಿ ತಲ್ಲೀನವಾಗಿದ್ದ ಅವನ ಮನಸ್ಸು ಕುಟುಂಬದ ವ್ಯವಹಾರಗಳ ಮೇಲೆ ನಿಲ್ಲುತ್ತಲೇ ಇರಲಿಲ್ಲ. ವಿಠಲನೇ ಅವನ ಸರ್ವಸ್ವವಾಗಿದ್ದನು. ಜೀವದ ಜೀವವಾಗಿದ್ದನು.

ತನ್ನ ಇಪ್ಪತ್ತನೆಯ ವಯಸ್ಸಿನಲ್ಲಿ ನಾಮದೇವನು ಮಹಾರಾಷ್ಟ್ರದ ಸಂತ ಹಾಗೂ ತತ್ತ್ವಜ್ಞಾನಿಯಾದ ಜ್ಞಾನದೇವನ ದರ್ಶನ ಮಾಡಿದನು. ಅವನೆಡೆಗೆ ಸೂಜಿಗಲ್ಲಿನಂತೆ ಆಕರ್ಷಿತನಾದನು. ಜ್ಞಾನದೇವನು ಆ ಸಮಯದಲ್ಲಿ ತೀರ್ಥಯಾತ್ರೆ ಕೈಗೊಂಡಿದ್ದನು. ನಾಮದೇವನನ್ನೂ ತನ್ನ ಜೊತೆಗೆ ಬರುವಂತೆ ಕೇಳಿಕೊಂಡನು. ಆದರೆ, ನಾಮದೇವನಿಗೆ ಪಂಢರಾಪುರದ ವಿಠಲನನ್ನು ಬಿಟ್ಟು ಬೇರೆಲ್ಲಿಗೂ ಹೋಗುವುದಕ್ಕೆ ಸ್ವಲ್ಪವೂ ಇಚ್ಛೆ ಇರಲಿಲ್ಲ. ವಿಠಲನನ್ನು ಮನದುಂಬಿ ಪ್ರಾರ್ಥಿಸಿದನು. ಕಡೆಗೆ ವಿಠಲನೇ ಜ್ಞಾನದೇವನ ಸತ್ಸಂಗ ಮಾಡುವಂತೆ ನಾಮದೇವನನ್ನು ಪ್ರೇರೇಪಿಸಿದನು. ತನ್ನ ಇಷ್ಟದೈವದ ಮಾತನ್ನು ಮೀರಲಾಗದೆ, ನಾಮದೇವನು ಜ್ಞಾನದೇವನೊಡನೆ ಹೊರಟನು.

ಮಾರ್ಗಮಧ್ಯದಲ್ಲಿ ಇಬ್ಬರು ಮಹಾತ್ಮರೂ ಅನೇಕ ಅದ್ಭುತಗಳನ್ನು ಮಾಡಿ ತೋರಿಸಿದರು. ಒಮ್ಮೆ ಅವರಿಬ್ಬರೂ ಮಾರ್ವಾಡ ಮರುಭೂಮಿಯನ್ನು ತಲುಪಿದರು. ಅಲ್ಲಿನ ಒಂದು ಬಾವಿಯನ್ನು ತಲುಪಿದರು. ಅಲ್ಲಿ ನೀರು ಬಹಳ ಕೆಳಗಿತ್ತು. ಜ್ಞಾನದೇವನು ತನ್ನ ಲಘಿಮಾ ಸಿದ್ಧಿಯನ್ನು ಉಪಯೋಗಿಸಿ, ಒಂದು ಪಕ್ಷಿಯ ರೂಪವನ್ನು ತಾಳಿದನು. ಬಾವಿಯ ಕೆಳಕ್ಕೆ ಹೋಗಿ ನೀರನ್ನು ಹೊತ್ತು ತಂದನು. ನಾಮದೇವನು ಭಕ್ತಿಯಿಂದ ರುಕ್ಮಿಣೀದೇವಿಯನ್ನು ಪ್ರಾರ್ಥಿಸಿದನು. ನೀರು ಉಕ್ಕಿ ಮೇಲೆ ಬಂತು. ಹರ್ಷದಿಂದ ನಾಮದೇವನು ಅದನ್ನು ಕುಡಿದನು. ಆ ಬಾವಿಯನ್ನು ಈಗಲೂ ನೋಡಬಹುದು. ಅದು ರಾಜಸ್ಥಾನದ ಬಿಕಾನೀರ್ ನಗರದ ಹತ್ತಿರವಿದೆ.

ತೀರ್ಥಯಾತ್ರೆಯ ಸಮಯದಲ್ಲಿ ನಾಮದೇವ ಮತ್ತು ಜ್ಞಾನದೇವರು ನಾಗನಾಥಪುರಿ ಎಂಬಲ್ಲಿಗೆ ಹೋದರು. ಅಲ್ಲಿನ ದೇವಸ್ಥಾನದಲ್ಲಿ ಭಜನೆಯನ್ನು ಆರಂಭಿಸಿದರು. ಅವರ ಸುತ್ತಲೂ ನೂರಾರು ಜನ ಸೇರಿದರು. ಅಲ್ಲಿನ ಅರ್ಚಕರಿಗೆ ಇದರಿಂದ ತೊಂದರೆಯಾಯಿತು. ನಂತರ ನಾಮದೇವನು ದೇವಸ್ಥಾನದ ಪಶ್ಚಿಮ ದ್ವಾರಕ್ಕೆ ಹೋಗಿ, ಅಲ್ಲಿ ರಾತ್ರಿಯೆಲ್ಲ ಭಜನೆ ಮಾಡಲಾರಂಭಿಸಿದನು. ಆಗ ದೇವರ ವಿಗ್ರಹವು ಪಶ್ಚಿಮದಿಕ್ಕಿಗೇ ತಿರುಗಿಬಿಟ್ಟಿತಂತೆ.

ಬೀದರ್ ನಗರದ ಬ್ರಾಹ್ಮಣನು ನಾಮದೇವನನ್ನು ತನ್ನ ಮನೆಗೆ ಆಹ್ವಾನಿಸಿದನು. ನಾಮದೇವನು ಅಲ್ಲಿಗೆ ನೂರಾರು ಸಂಖ್ಯೆಯ ಭಕ್ತರೊಡನೆ ಹೋದನು. ಆ ಊರಿನ ಸುಲ್ತಾನನು ಇದೊಂದು ಬಂಡಾಯವೆಂದು ತಪ್ಪಾಗಿ ಭಾವಿಸಿದನು. ತನ್ನ ಸೇನಾಧಿಪತಿಯನ್ನು ಅಲ್ಲಿಗೆ ಕಳಿಸಿದನು. ಸೇನಾಧಿಪತಿಯು ಇದೊಂದು ಧಾರ್ಮಿಕ ಗುಂಪು ಎಂದು ವರದಿ ಸಲ್ಲಿಸಿದನು. ಆದರೂ ಸುಲ್ತಾನನಿಗೆ ತೃಪ್ತಿಯಾಗಲಿಲ್ಲ. ನಾಮದೇವನನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದನು. ಇದಲ್ಲದೆ, ತಾನು ನಿರಪರಾಧಿ ಎಂದು ಸಾಬೀತು ಪಡಿಸಲು, ಸತ್ತ ಹಸುವೊಂದನ್ನು ಮತ್ತೆ ಬದುಕಿಸೆಂದೂ ಆಜ್ಞೆಯಿತ್ತನು. ಇಲ್ಲದಿದ್ದರೆ ಇಸ್ಲಾಂ ಧರ್ಮಕ್ಕೆ ಮತಾಂತರಗೊಳ್ಳಬೇಕೆಂದು ನಿರ್ಬಂಧಿಸಿದನು. ನಾಮದೇವ ಈ ಬೆದರಿಕೆಗೆ ಹೆದರಲಿಲ್ಲ. ಅವನು ಸಾಯುವುದಕ್ಕೂ ತಯಾರಾದನು. ವಿಠಲನ ದಯದಿಂದ ಸತ್ತ ಹಸುವಿಗೂ ಜೀವ ಬಂತು. ನಾಮದೇವನ ವಿಠಲಭಕ್ತಿಯನ್ನು ಸುಲ್ತಾನನೂ ಮೆಚ್ಚಿಕೊಂಡನು.

ತಮ್ಮ ತೀರ್ಥಯಾತ್ರೆಯ ಸಮಯದಲ್ಲಿ ಜ್ಞಾನದೇವ ಮತ್ತು ನಾಮದೇವರು ಅನೇಕ ಸಂತಮಹಾಂತರನ್ನು ದರ್ಶಿಸಿದರು. ತೀರ್ಥಯಾತ್ರೆ ಮುಗಿದ ನಂತರ ಪಂಢರಾಪುರದಲ್ಲಿ ಒಂದು ದೊಡ್ಡ ಸಂತರ್ಪಣೆ ಏರ್ಪಾಡಾಗಿತ್ತು. ಸ್ವತಃ ವಿಠಲ ರುಕ್ಮಿಣಿಯರೇ ತನ್ನ ಸಂಗಡಿಗರೊಂದಿಗೆ ಅಡಿಗೆ ಮಾಡಿದರಂತೆ ಮತ್ತು ಊಟ ಬಡಿಸಿದರಂತೆ. ಅಲ್ಲದೆ ನಾಮದೇವ ಉಂಡ ಎಲೆಯಲ್ಲೇ ಅವರಿಬ್ಬರೂ ಉಂಡರಂತೆ. ಎಷ್ಟಿದ್ದರೂ ಭಗವಂತ ಭಕ್ತಪರಾಧೀನನಲ್ಲವೆ? ಐದು ವರ್ಷಗಳ ಕಾಲ ನಡೆದ ತೀರ್ಥಯಾತ್ರೆ ಹೀಗೆ ಸಂಪನ್ನಗೊಂಡಿತು.

ಏತನ್ಮಧ್ಯೆ ನಾಮದೇವನಲ್ಲಿ ಒಂದು ಮಹತ್ವದ ಪರಿವರ್ತನೆ ಆಗುತ್ತಲಿತ್ತು. ಇದುವರೆಗೆ ನಾಮದೇವನು ಯಾರನ್ನೂ ತನ್ನ 'ಗುರು'ವಾಗಿ ಸ್ವೀಕರಿಸಿರಲಿಲ್ಲ. ಅವನು ಚಿಕ್ಕವಯಸ್ಸಿನಿಂದ ವಿಠಲನನ್ನೇ ತನ್ನ ಸರ್ವಸ್ವವೆಂದು ತಿಳಿದುಕೊಂಡಿದ್ದನು. ಅವನು ದೈವವೆಂದರೆ ವಿಠಲನೇ ಎಂಬ ಸಂಕುಚಿತ ಮನೋಭಾವವನ್ನು ಹೊಂದಿದ್ದನು. ಇದರಿಂದ ಹೊರಬರಲು ಗುರುವಿನ ಉಪದೇಶ ಆವಶ್ಯಕವಾಗಿತ್ತು. ಹಾಗೆಂದೇ ಜ್ಞಾನಿಯಾದ ಜ್ಞಾನದೇವನು ಗುರುವೊಬ್ಬನನ್ನು ಹುಡುಕಿಕೊಳ್ಳುವಂತೆ ನಾಮದೇವನನ್ನು ಒತ್ತಾಯಿಸಿದನು. ಒಮ್ಮೆ ಮಹಾಭಕ್ತನಾದ ಗೋರಾ ಕುಂಬಾರನ ಮನೆಯಲ್ಲಿ ಭಕ್ತರೆಲ್ಲ ನೆರೆದಿದ್ದರು. ಜ್ಞಾನದೇವನು ನೆರೆದಿರುವವರಲ್ಲಿ ಅರ್ಧಬೇಯಿಸಿದ ಮಡಕೆ (ಅಲ್ಪಜ್ಞಾನಿ) ಅದಾವುದು ಎಂದು ಕಂಡುಹಿಡಿಯುವಂತೆ ಗೋರಾ ಕುಂಬಾರನನ್ನು ಕೇಳಿಕೊಂಡನು. ಗೋರಾ ಒಂದು ಮರದ ಬೆತ್ತ ದಿಂದ, ಮಡಕೆಗಳನ್ನು ಪರೀಕ್ಷಿಸುವ ರೀತಿಯಲ್ಲಿ, ಎಲ್ಲರ ತಲೆಯ ಮೇಲೆ ಬಡಿಯುತ್ತ ಹೋದನು. ನಾಮದೇವನ ತಲೆಗೆ ಬಡಿದಾಗ ಅವನು ರೇಗಾಡಿದನು. ಗೋರಾ ನಗುತ್ತ, ''ಇದೇ ಅರ್ಧ ಬೆಂದ ಮಡಕೆ'' ಎಂದನು. ಇದರಿಂದಾಗಿ ನಾಮದೇವನಿಗೆ ತುಂಬ ಲಜ್ಜೆಯಾಯಿತು. ಮಾರ್ಗದರ್ಶನ ಮಾಡುವಂತೆ ತನ್ನ ದೈವ ವಿಠಲನನ್ನು ಕೇಳಿಕೊಂಡನು. ಆ ದೇವರು ಕೂಡ ಗುರುವಿನ ಆವಶ್ಯಕತೆಯನ್ನು ಎತ್ತಿಹೇಳಿದನು. ಅವಂಧ್ಯ ಎಂಬ ಹಳ್ಳಿಯಲ್ಲಿ ನೆಲೆಸಿರುವ ವಿಸೋಬಾ ಖೇಚರ್ ಎಂಬುವ ಮಹಾತ್ಮನೇ ನಿನ್ನ ಗುರು ಎಂದು ಕೂಡ ಹೇಳಿದನು.

ವಿಸೋಬಾನನ್ನು ಹುಡುಕಿಕೊಂಡು ನಾಮದೇವನು ಆ ಹಳ್ಳಿಯನ್ನು ತಲುಪಿದನು. ಅಲ್ಲಿನ ಶಿವಾಲಯಕ್ಕೆ ಹೋದನು. ಅಲ್ಲೊಬ್ಬ ಮುದುಕನು ಶಿವಲಿಂಗಕ್ಕೆ ಕಾಲುಮಾಡಿ ಮಲಗಿಕೊಂಡಿದ್ದನು. ನಾಮದೇವನು ಅವನ ಮೇಲೆ ಕೋಪಗೊಂಡನು. ಮುದುಕನು ನಾಮದೇವನಿಗೆ, ''ದೇವರು ಇಲ್ಲದೆಡೆ ಕಾಲನ್ನು ಎತ್ತಿಡು'' ಎಂದು ಕೇಳಿಕೊಂಡನು. ನಾಮದೇವನು ಎಲ್ಲೆಲ್ಲಿ ಮುದುಕನ ಕಾಲನ್ನು ಎತ್ತಿಟ್ಟರೂ ಅಲ್ಲೆಲ್ಲ ಶಿವಲಿಂಗವು ಕಾಣಿಸಹತ್ತಿತು. ನಾಮದೇವನಿಗೆ ತನ್ನ ತಪ್ಪಿನ ಅರಿವಾಯಿತು. ಅವನು ಮುದುಕನ ಕಾಲಿಗೆ ಬಿದ್ದನು. ಆ ಮುದುಕನೇ ಅವನ ಭಾವಿ ಗುರು ವಿಸೋಬಾ ಖೇಚರ್.

ಗುರುವಾದ ವಿಸೋಬಾ ಭಗವಂತನ ಸರ್ವವ್ಯಾಪಕತೆಯನ್ನು ನಾಮದೇವನಿಗೆ ಮನಗಾಣಿಸಿದನು. ಇದರಿಂದ ಪ್ರಭಾವಿತನಾದ ನಾಮದೇವನು ತನ್ನ ಗುರುವಿಗೆ ಚಿರಋಣಿಯಾದನು. ವಿಸೋಬಾದ ಉಪದೇಶ ಹೀಗಿತ್ತು : ''ನೀನು ನಿಜವಾಗಲೂ ಸಂತಸದಿಂದ ಇರಲು ಇಚ್ಛಿಸುವೆಯಾದರೆ, ಇಡೀ ಜಗತ್ತನ್ನೇ ವಿಠಲನಿಂದ ತುಂಬಿಬಿಡು. ಯಾವತ್ತೂ ಭಗವಂತನ ಪವಿತ್ರನಾಮವನ್ನು ಉಚ್ಚರಿಸುತ್ತಿರು. ಭಗವಂತನೇ ಈ ಜಗತ್ತಾಗಿದ್ದಾನೆ. ಈ ಜಗತ್ತು ಭಗವಂತನ ವಿರಾಟ್ ರೂಪವಲ್ಲದೆ ಬೇರೆಯಲ್ಲ. ಎಲ್ಲ ಬಗೆಯ ಮಹತ್ವಾಕಾಂಕ್ಷೆಗಳನ್ನೂ, ಆಸೆಗಳನ್ನೂ ತ್ಯಜಿಸು. ವಿಠಲನ ನಾಮದಿಂದ ಮಾತ್ರವೇ ಸಂತೃಪ್ತನಾಗಿರು.''

ಗುರುವಿನಿಂದ ದೀಕ್ಷೆ ಪಡೆದ ನಾಮದೇವನು ಉದಾರ ಹೃದಯದವನಾದನು; ತತ್ತ್ವಜ್ಞಾನಿಯಾದನು. ಅವನ ಮನಸ್ಸು ಪಂಢರಾಪುರದ ವಿಠಲನ ಮೇಲೆ ಮಾತ್ರ ಸೀಮಿತವಾಗಲಿಲ್ಲ; ಇಡೀ ಪ್ರಪಂಚವನ್ನು ವ್ಯಾಪಿಸಿರುವ ಭಗವಂತನಲ್ಲಿ ನೆಲೆಸಿತು. ಇದಾಗಿ ಕೆಲವು